**ದಿನಾಂಕಃ 24.05.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಬಿ ವಕೀಲರಿಂದಃ-</u>**

ನನ್ನ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಾದಿ ಶಂಕರಮ್ಮ ಅಂತರಘಟ್ಟೆ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು ಸಂಕ್ಲಾಪುರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಸಂಕ್ಲಾಪುರ ಗ್ರಾಮ ಮತ್ತು ಅಂತರಘಟ್ಟೆ ಗ್ರಾಮದ ನಡುವೆ ನಾಲ್ಕು ಕಿಮಿ ಅಂತರ ಇರುತ್ತದೆ.

ವಾದಿಗೆ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ದಾವಾ ಸ್ವತ್ತನ್ನು ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ರವರಿಗೆ ಸೇರಿದ ಆಸ್ತಿಯನ್ನು ನೋಡಿರುತ್ತೇನೆ. ಪ್ರತಿವಾದಿಗೆ ಸದರಿ ಆಸ್ತಿ ಯಾವ ವರ್ಷದಲ್ಲಿ ಮಂಜೂರಾತಿ ಆಯಿತು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ವಾದಿಗೆ ಸೇರಿದ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಅಸ್ತಿಯಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲ ಆದರೆ ಪ್ರತಿವಾದಿ ಆಸ್ತಿಯಲ್ಲಿ ಮನೆ ಮತ್ತು ಮೆಟ್ಟಿಲುಗಳು ಇದೆ. ವಾದಿಗೆ ಸೇರಿದ ಆಸ್ತಿ ಪೂರ್ವ ಪಶ್ಚಿಮ 6.5 ಅಡಿ, ಉತ್ತರ ದಕ್ಷಿಣ 40 ಅಡಿ ವಿಸ್ತೀರ್ಣದ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿ ಮೆಟ್ಟಿಲುಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೆಟ್ಟಿಲು ಮತ್ತು ಮೇಲ್ಚಾವಣಿ ಜಾಗ ವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಿಪಿ-9 ರ ಬಾವಚಿತ್ರದಲ್ಲಿ ಕಾಣುವ ಪೆಟ್ಟಿಗೆ ಅಂಗಡಿ ವಾದಿಗೆ ಸೇರಿದೆ ಎಂದರೆ ಸರಿ. ಪೆಟ್ಟಿಗೆ ಅಂಗಡಿಯ ಪಶ್ಚಿಮದ ಜಾಗ ವಾದಿಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಖಾಲಿ ಜಾಗ ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಿರ್ಮಿಸಿರುವ ಮೇಲ್ಚಾವಣಿಯಿಂದ ಬರುವ ನೀರುವ ವಾದಿಯ ಜಾಗದಲ್ಲಿ ಬೀಳುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಕುಟುಂಬಕ್ಕೆ ಪೂರ್ವ ಪಶ್ಚಿಮ 60 ಅಡಿ ಮತ್ತು ಉತ್ತರ ದಕ್ಷಿಣ 40 ಅಡಿ ಆಸ್ತಿ ಮಂಜೂರಾಗಿರುತ್ತದೆ. ಪ್ರತಿವಾದಿಯ ತಾತ ಸರ್ಕಾರದ ವಿರುದ್ದ ಸಲ್ಲಿಸಿದ ದಾವೆ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ

ದಾವೆ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.